ಓಎಸ್ ನಂ.60/2018 ಪಿ.ಡಬ್ಲ್ಯೂ- 1

ಸಾಕ್ಷಿಯನ್ನು ದಿನಾಂಕ 07.04.2021 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೆ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಸಲ್ಲಿಸಿದ್ದು ಈಗ ಅವುಗಳನ್ನು ನೋಡಿ ಗುರುತಿಸುತ್ತಿದ್ದೇನೆ. ಗ್ರಾಂಟ್ ಸರ್ಟಿಫಿಕೇಟ್ ನ ನಕಲನ್ನು ನಿಪಿ.1 ಎಂದು, ನಕಾಶೆ ನಕಲನ್ನು ನಿಪಿ.2 ಎಂದು, ಅಫಿಶಿಯಲ್ ಮೆಮೊರಾಂಡಮ್ ನ ನಕಲನ್ನು ನಿಪಿ.3 ಎಂದು, ಅಹವಾಲು ತಖ್ತೆಯ ನಕಲನ್ನು ನಿಪಿ.4 ಎಂದು, ದರಖಾಸ್ತು ಅರ್ಜಿಯ ನಕಲನ್ನು ನಿಪಿ.5 ಎಂದು, ಸ.ನಂ.101 ರ 6 ಪಹಣಿಗಳನ್ನು ನಿಪಿ.6 ರಿಂದ 11 ಎಂದು, ಸ.ನಂ.100 ರ ಇಂಡೆಕ್ಸ್ ಆಫ್ ಲ್ಯಾಂಡ್ ನ ನಕಲನ್ನು ನಿಪಿ.12 ಎಂದು, ತಹಶೀಲ್ದಾರ್ ರವರು ನೀಡಿದ 2 ಹಿಂಬರಹವನ್ನು ನಿಪಿ.13 ಮತ್ತು 14 ಎಂದು, ತಿಳುವಳಿಕೆ ಪತ್ರವನ್ನು ನಿಪಿ 15 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಸಮಯ ಕೋರಿ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.